cally sanctioned by the Chief Engineer, Minor Irrigation and Public Health Engineering in No. PHE/HD/TS/74-75 dated 25th September 1975.

The augmentation of water supply scheme with Balkunda tank as source for the supply of water at the rate of 20 GPCD to the prospective population of 40,000 people is under investigation.

SRI BAPURAO ANANDARAO.—Madam Speaker, as the tank work has been completed and the population has increased, will the Government assure us to supply 20 gallons of water to the town? when the present scheme will be expedited and when it will be given effect to?

SRI D. K. NAIKAR —Madam Speaker, I have mentioned in my statement that the matter is under investigation. After the proposals are received from the Board, the Government will examine the feasibility of the Scheme.

Taking up Some Urgent notices from Members

ಶ್ರೀ ಬಿ. ಎ. ಕಕ್ಕಿರಾಯ.—ಅಧ್ಯಕ್ಷರೆ?, ನಾನು ರೂಲ್ಸ್ 312ರ ಪ್ರಕಾರ ಮಂಗಳೂರು ಪಾಲಿಟೆಕ್ನಿಕ್‌ನಲ್ಲಿ ಆಡ್ಮಿಷನ್ ಮಾಡಿಕೊಳ್ಳುತ್ತಿರುವ ಬಗ್ಗೆ ಒಂದು ನೋಟೀಸ್ ಕೊಟ್ಟಿದ್ದೇನೆ. ಅದು ಇನ್ನೂ ಬಂದಿಲ್ಲಾ.

ಅಧ್ಯಕ್ಷರು.— ತಾವು ನಿನ್ನೆ ತಾನೇ ಕೊಟ್ಟಿದ್ದೀರಿ.

ಶ್ರೀ ಬಿ. ಎ. ಕಕ್ಕಿರಾಯ.— ಅಧ್ಯಕ್ಷರೆ, ಇದು ಬಹಳ ಗಂಭೀರವಾದ ಮತ್ತು ತುರ್ತಾದ ಪ್ರಶ್ನೆ.

ಅಧ್ಯಕ್ಷರು.—ತಾವು ರೂಲ್ಸ್ 312ರ ಕೆಳಗೆ ಕೊಟ್ಟಿರುವ ನೋಟೀಸ್ ಈಗ್ಲೊತ್ತೇ ಬರತಕ್ಕಂಥಾ ಅವಶ್ಯಕತೆ ಇಲ್ಲ. ಈಗ್ಲೊತ್ತು ಎರಡು ಮುಖ್ಯವಾದ ಡಿಮ್ಯಾಂಡ್‌ಗಳು ಇವೆ. ಅವು ಮುಗಿಯಲಿ.

ಶ್ರೀ ಯು. ಟಿ. ಫರೀದ್ — ಅಧ್ಯಕ್ಷರೇ, ಇದು ಬಹಳ ತುರ್ತಾದ ವಿಷಯ. ಏತಕ್ಕೆಂದರೆ ಈಗ್ಲೊತ್ತೊ ನಾಳೆಯೋ ಮಂಗಳೂರು ಪಾಲಿಟೆಕ್ನಿಕ್‌ನಲ್ಲಿ ಆಡ್ಮಿಷನ್ ಲಿಸ್ಟ್‌ನ್ನು ಪಬ್ಲಿಷ್ ಮಾಡುತ್ತಾರೆ. ಅವರು ಮಾಡಿರೋದನ್ನು ನೋಡಿದರೆ ಆಲ್ಲಿ ಮೆರಿಟ್‌ನಲ್ಲಿರುವಂಥಾ ಕ್ಯಾಂಡಿಡೇಟ್ಸ್‌ಗೆ ಸೀಟುಗಳನ್ನೇ ಕೊಟ್ಟಿಲ್ಲ, ಬೇರೆ ಬೇರೆ ಯಾರ್ಯಾರಿಗೋ ಸೀಟುಗಳನ್ನು ಕೊಟ್ಟಿದ್ದಾರೆ. ಅದು ದರಿಂದ ಇದು ಬಹಳ ತುರ್ತಾಗಿದೆ.

ಅಧ್ಯಕ್ಷರು — ನಿನ್ನೆ ನೋಟೀಸ್ ತಾನೇ ಬಂದಿದೆ ಅದನ್ನು ನಾನು ಸರ್ಕಾರಕ್ಕೆ ಕಳುಹಿಸಿದ್ದೇನೆ ಆದಕ್ಕೆ ಸ್ವಲ್ಪ ಸಮಯ ಬೇಡವೆ?

ಶ್ರೀ ಯು. ಟಿ. ಫರೀದ್.— ಹಾಗಾದರೆ ಇದಕ್ಕೆ ಉತ್ತರ ಬರುವುದರೊಳಗಾದರೂ ಕೂಡ ಆಲ್ಲ ಏನು ಆಡ್ಮಿಷನ್ ಲಿಸ್ಟ್ ಮಾಡಿಕೊಂಡಿರುತ್ತಾರೋ ಅದನ್ನು ತಡೆಹಿಡಿಯುವುದಕ್ಕಾದರೂ ಹೇಳಲಿ.

ಅಧ್ಯಕ್ಷರು — ಈಗ್ಲೊತ್ತು ಈಗ ಈ ಸದನದಲ್ಲಿ ಇದಕ್ಕೆ ಸಂಬಂಧಪಟ್ಟವರು ಯಾರೂ ಇಲ್ಲ. ಎಜುಕೇಷನ್ ಮಂತ್ರಿಗಳು ಇಲ್ಲ.

ಶ್ರೀ ಯು. ಟಿ. ಫರೀದ್.— ಅವರು ಈ ಲಿಸ್ಟ್‌ನ್ನು ಪಬ್ಲಿಕೇಷನ್ ಮಾಡಿಬಿಟ್ಟರೆ ಅಮೇಲೆ ಬಹಳ ಕಷ್ಟವಾಗುತ್ತದೆ. ಆದುವರೆಗಾದರೂ ಕೂಡ ಅವರಿಗೆ ಒಂದು ಪ್ರೊಟೆಕ್ಷನ್ ಕೊಡಬೇಕಾಗುತ್ತದೆ, ಆದುದರಿಂದ ಇದಕ್ಕೆ ಉತ್ತರ ಬರುವವರೆಗಾದರೂ ಆ ಲಿಸ್ಟ್‌ನ್ನು ತಡೆಹಿಡಿಯುವುದ ಕ್ಕಾದರೂ ಹೇಳಲಿ,

ಅಧ್ಯಕ್ಷರು.— ಈಗ ಇದಕ್ಕೆ ಸಂಬಂಧಪಟ್ಟ ಮಂತ್ರಿಗಳೂ ಯಾರೂ ಇಲ್ಲ, ಆದುದರಿಂದ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ. ಎಸ್. ಕೃಷ್ಣನ್.— ಅಧ್ಯಕ್ಷರೇ ನಾನು ಲೇಬರ್ ವಿಷಯಕ್ಕೆ ಸಂಬಂಧಪಟ್ಟಂತೆ ಒಂದು ಠರಾವನ್ನು ಕಳುಹಿಸಿಕೊಟ್ಟಿದ್ದೇನೆ.

ಅಧ್ಯಕ್ಷರು.— ತಾವು ಸಹ ಹೀಗೆ ಮಾಡುತ್ತೀರಲ್ಲಾ ನನಗೂ ಗೊತ್ತು. ನಾನು ಎಷ್ಟೊ ಸಲ ಹೇಳಿದ್ದೇನೆ ನಾನು ಬಹಳ ಮುಂಚೆನೇ ನನ್ನ ಥೇಂಬರ್‌ಗೆ ಬಂದಿರುತ್ತೇನೆ ತಾವು ನನ್ನನ್ನು ಭೇಟಿ ಮಾಡಿ ಇದನ್ನು ಹೇಳಬಹುದಾಗಿತ್ತಲ್ಲಾ.

ಶ್ರೀ ಎಂ ಎಸ್ ಕೃಷ್ಣನ್.— ಈ ಬಗ್ಗೆ ನಿನ್ನೆ ದಿವಸ ಚರ್ಚೆ ಆಯಿತು ಮೊನ್ನೆ ದಿವಸ ಚರ್ಚೆ ಆಯಿತು. ಮುಖ್ಯಮಂತ್ರಿಗಳು ಬರಬೇಕು ಎಂದು ಹೇಳಿದರಿ.

ಅಧ್ಯಕ್ಷರು.— ತಾವು ನಿನ್ನೆ ದಿವಸ ಕೊಟ್ಟಿದ್ದೀರಿ. ಅದಕ್ಕೆ ಸರ್ಕಾರದಿಂದ ಉತ್ತರ ಬಂದ ಮೇಲೆ ತಾನೇ ಅಜೆಂಡಾದಲ್ಲಿ ಹಾಕಿಸಬೇಕಾದ್ದು.

ಶ್ರೀ ಕಾಗೋಡು ತಿಮ್ಮಪ್ಪ — ಈಗ ಮುಖ್ಯಮಂತ್ರಿಗಳು ಬಂದಿಲ್ಲಾ. ಈ ಬಗ್ಗೆ ತಾವೇ ಅನುಮತಿ ಕೊಟ್ಟು ಒಂದು ದಿನವನ್ನು ನಿಗದಿ ಮಾಡಿಬಿಡಿ.

ಅಧ್ಯಕ್ಷರು.— ಮುಖ್ಯಮಂತ್ರಿಗಳು ಬರಲಿ. ಅನಂತರ ಕಾಲವನ್ನು ನಿಗದಿ ಮಾಡೋಣ. ನೀವು ಕಳುಹಿಸಿಕೊಟ್ಟಿರುವ ಠರಾವನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇನೆ.

ಶ್ರೀ ಎಂ ಎಸ್. ಕೃಷ್ಣನ್.— ಈವೊತ್ತು ಅವರು ಬರುವುದಿಲ್ಲಾ, ನಾಳೆಯೂ ಅವರು ಬರುವುದಿಲ್ಲ. ಶ್ರೀ ಸಿ. ಎನ್, ಪಾಟೀಲರು ಪತ್ರೆಯೇ ಇಲ್ಲ. ಹಾಗಾದರೆ ನಾವು ಅವರನ್ನು ಯಾವತ್ತು ಕೇಳುವುದಕ್ಕಾಗುತ್ತದೆ ಅಥವಾ ಕೇಳುವುದಕ್ಕಾಗುವುದಿಲ್ಲವೇ ಹೇಳಲಿ.

ಅಧ್ಯಕ್ಷರು.— ಮುಖ್ಯಮಂತ್ರಿಗಳು 3 ಗಂಟೆಗೆ ಬರುತ್ತಾರಂತೆ, ಆಮೇಲೆ ನೋಡೋಣ.

ಶ್ರೀ ಎಂ. ಎಸ್ ಕೃಷ್ಣನ್.— ಒಂದುವೇಳೆ ಅವರು ಈಪೊತ್ತು ಬಂದೇ ಹೋದರೆ ನಾಳೆ ಯಾದರೂ ಕೂಡ ಇದಕ್ಕೆ ಅವಕಾಶ ಮಾಡಿಕೊಡಬೇಕೆಂದು ನನ್ನ ಪ್ರಾರ್ಥನೆ.

Budget Estimates for 1977-78

Demands for Grants Demand No.s 21, 26, 27 and 32

(Debate Continued)

† ಶ್ರೀ ಆರ್. ಗುಂಡೂರಾವ್ (ಯುವಜನ ಹಾಗೂ ವಸತಿ ಶಾಖೆಗಳ ಮಂತ್ರಿಗಳು).— ಸನ್ಮಾನ್ಯ ಅಧ್ಯಕ್ಷರೇ. ನಿನ್ನೆ ದಿವಸ ನನ್ನ ಇಲಾಖೆಗೆ ಸೇರಿದಂಥಾ ಯುವಜನ ಹಾಗೂ ವಸತಿ ಇಲಾಖೆ ಬಗ್ಗೆ ಮಾನ್ಯ ಸದಸ್ಯರುಗಳು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಮತ್ತು, ಈ ಬಗ್ಗೆ ಅವರುಗಳು ಯಾವುದೇ ತರಹ ಟೀಕೆಗಳನ್ನು ಮಾಡಲಿಲ್ಲಾ. ಬಹಳ ಸಂತೋಷ ಅವಕ್ಕೋಸ್ಕರ ನಾನು ಎಲ್ಲಾ ಸದಸ್ಯರಿಗೂ ಕೂಡ ನನ್ನ ಧನ್ಯವಾದಗಳನ್ನರ್ಪಿಸುತ್ತೇನೆ, ಅಧ್ಯಕ್ಷರೇ, ನಾನು ಕೆಲವು ಸಾರಿ ಹೇಳಿದ್ದೇನೆ.ಈ ಯುವಜನ ಇಲಾಖೆ ಇತರೇ ಎಲ್ಲಾ ಇಲಾಖೆಗಳಿಗಿಂತಲೂ ಬಹು ಮುಖ್ಯ ವಾದಂಥಾ ಇಲಾಖೆ ಎಂದು ಆದರೂ ಸಹ ನಾನು ಮೊದಲು ಏನು ಯೋಚನೆ ಮಾಡಿದ್ದೆ ಎಂದರೆ ನಮ್ಮ ಸದಸ್ಯರು ಈ ಬಗ್ಗೆ ಇನ್ನೂ ಅನೇಕ ತರಹವಾದ ಸಲಹೆಗಳನ್ನು ಈ ಸದನದಲ್ಲಿ ಕೊಡುತ್ತಾರೆ ಅಂತ. ಏತಕ್ಕೆಂದರೆ ಈ ದೇಶದ ಭವಿಷ್ಯ ಮತ್ತು ಈ ದೇಶದ ಶಿಸ್ತು ಮತ್ತು ಈ ದೇಶದ ಭದ್ರತೆ ಇವೆಲ್ಲಾ ನಮ್ಮ ಯುವಜನರ ಮೇಲೆ ಹೊಂದಿಕೊಂಡಿದೆ. ಆದರೆ ಅನೇಕ ಮಾನ್ಯ ಸದಸ್ಯರು ಬೇರೆ ಬೇರೆ ಇಲಾಖೆ ಬಗ್ಗೆ ಸಲಹೆಗಳನ್ನು ಕೊಟ್ಟರು.ನನಗೆ ಒಂದು ತರಹ ಸಂತೋಷವಾಗಿದೆ. ಏತಕ್ಕೆಂದರೆ ಕಳೆದ ವರ್ಷಗಳಿಂದಲೂ ಕೂಡ ಯಾವುದೇ ಒಂದು ಟೀಕೆಗೆ ಒಳಗಾಗದೆ ಈ ಇಲಾಖೆ ಕೆಲಸ ಮಾಡುತ್ತಾ ಇದೆ. ನಾನು ಈ ಬಗ್ಗೆ ಹೆಮ್ಮೆಯಿಂದ ಹೇಳಬೇಕಾದರೆ ಒಂದಾನೊಂದು ಕಾಲದಲ್ಲಿ ಕರ್ನಾಟಕ ಯಾವ ಒಂದು ಕ್ರೀಡೆಯಲ್ಲಾಗಲಿ ಅಥವಾ ಇನ್ನೂ ಇತರ ಕಾರ್ಯಚಟುವಟಿಕೆಗಳಲ್ಲಾಗಲಿ ರಾಷ್ಟ್ರದಲ್ಲಿರುವ ಅನೇಕ ರಾಜ್ಯಗಳಿಗೆ ಬಹಳ ಹಿಂದುಳಿದಿದ್ದಂಥಾ ಕರ್ನಾಟಕ ಈಪೊತ್ತು ಇಡೀ ಭಾರತದಲ್ಲಿ